# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 369 |
| ಸದಸ್ಯರ ಹೆಸರು | : | ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 15-09-2022 |
| ಉತ್ತರಿಸಬೇಕಾದ ಸಚಿವರು | : | ಮುಖ್ಯಮಂತ್ರಿಯವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಕೊಳಚೆ ನೀರಿನ ಶುದ್ಧೀಕರಣ ಮಾಡುವ ಘಟಕಗಳ ಸಂಖ್ಯೆ ಎಷ್ಟು; ಸದರಿ ಘಟಕಗಳು ಶುದ್ಧೀಕರಿಸುವ ನೀರಿನ ಪ್ರಮಾಣವೆಷ್ಟು; ಎಷ್ಟು ಹಂತಗಳಲ್ಲಿ ನೀರನ್ನು ಶುದ್ಧೀಕರಣ ಮಾಡಲಾಗುತ್ತಿದೆ: (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಕೊಳಚೆ ನೀರನ್ನು ಬೆಂಗಳೂರು ಜಲಮಂಡಳಿಯ 36 ತ್ಯಾಜ್ಯ ನೀರು ಶುದ್ಧೀಕರಣ ಘಟಕಗಳಿಂದ ಶುದ್ಧೀಕರಿಸಲಾಗುತ್ತಿದೆ. ಸದರಿ ಘಟಕಗಳಿಂದ ದಿನಂಪ್ರತಿ 1212 ದಶಲಕ್ಷ ಲೀಟರ್ ತ್ಯಾಜ್ಯ ನೀರನ್ನು ಶುದ್ಧೀಕರಿಸಲಾಗುತ್ತಿದೆ. ಇದರಲ್ಲಿ ದಿನಂಪ್ರತಿ 35 ದಶಲಕ್ಷ ಲೀಟರ್ ತ್ಯಾಜ್ಯ ನೀರನ್ನು ತೃತೀಯ ಹಂತದಲ್ಲಿ ಶುದ್ಧೀಕರಿಸಲಾಗುತ್ತಿದೆ ಹಾಗೂ 1177 ದಶಲಕ್ಷ ಲೀಟರ್ ತ್ಯಾಜ್ಯ ನೀರನ್ನು ದ್ವಿತೀಯ ಹಂತದಲ್ಲಿ ಶುದ್ಧೀಕರಿಸಲಾಗುತ್ತಿದೆ. |
| ಆ) | ನೀರನ್ನು ಶುದ್ಧೀಕರಿಸುವ ಪ್ರಕ್ರಿಯೆಗೆ ಆಗುವ ವಿದ್ಯುತ್ ಹಾಗೂ ನಿರ್ವಹಣೆ ವೆಚ್ಚವೆಷ್ಟು; ಸದರಿ ಎಲ್ಲಾ ಘಟಕಗಳ ಪ್ರತಿ ತಿಂಗಳ ವೆಚ್ಚವೆಷ್ಟು; (ವಿದ್ಯುತ್ ಶುಲ್ಕ ಆಡಳಿತ ವೆಚ್ಚ, ಹಾಗೂ ಇನ್ನಿತರೆ ಎಲ್ಲಾ ಖರ್ಚುಗಳನ್ನು ಒಳಗೊಂಡ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ತ್ಯಾಜ್ಯ ನೀರನ್ನು ಶುದ್ಧೀಕರಿಸುವ ಪ್ರಕ್ರಿಯೆಗೆ ಬಳಸುವ ವಿದ್ಯುತ್‌ಗೆ ಸರಾಸರಿ ರೂ.607 ಲಕ್ಷಗಳು ಪ್ರತಿ ತಿಂಗಳಿಗೆ ವೆಚ್ಚ ಮಾಡಲಾಗುತ್ತಿದೆ ಹಾಗೂ ಘಟಕಗಳ ನಿರ್ವಹಣೆಗೆ ಸರಾಸರಿ ರೂ.433 ಲಕ್ಷ ಪ್ರತಿ ತಿಂಗಳಿಗೆ ವೆಚ್ಚ ಮಾಡಲಾಗುತ್ತಿದೆ. ಸದರಿ ಎಲ್ಲಾ ಘಟಕಗಳ ಆಡಳಿತ, ವಿದ್ಯುತ್, ಇತರೆ ಎಲ್ಲಾ ವೆಚ್ಚ ಒಳಗೊಂಡು ಸರಾಸರಿ ರೂ.1080 ಲಕ್ಷಗಳನ್ನು ಪ್ರತಿ ತಿಂಗಳಿಗೆ ವೆಚ್ಚ ಮಾಡಲಾಗುತ್ತಿರುತ್ತದೆ. |
| ಇ) | ಸದರಿ ಶುದ್ಧೀಕರಿಸಿದ ನೀರನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಎಲ್ಲೆಲ್ಲಿಗೆ ಸರಬರಾಜು ಮಾಡಲಾಗುತ್ತಿದೆ; (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ➤ ಪ್ರಸ್ತುತ ಕೋರಮಂಗಲ ಮತ್ತು ಚಲ್ಲಘಟ್ಟ ಕಣಿವೆಯ ಘಟಕಗಳಿಂದ ದ್ವಿತೀಯ ಹಂತದಲ್ಲಿ ಶುದ್ಧೀಕರಿಸುವ 350 ಎಂ.ಎಲ್.ಡಿ ನೀರನ್ನು ಕೋಲಾರ ಜಿಲ್ಲೆಯ ಕೆರೆಗಳನ್ನು ತುಂಬಿಸಲು ಹಾಗೂ 60 ಎಂ.ಎಲ್.ಡಿ ನೀರನ್ನು ಆನೇಕಲ್ ತಾಲ್ಲೂಕಿನ ಕೆರೆಗಳನ್ನು ತುಂಬಿಸಲು ಸಣ್ಣ ನೀರಾವರಿ ಇಲಾಖೆಗೆ ಸರಬರಾಜು ಮಾಡಲಾಗುತ್ತಿದೆ.<br>➤ ಹೆಬ್ಬಾಳ ಕಣಿವೆಯ ಘಟಕಗಳಿಂದ ದ್ವಿತೀಯ ಹಂತದಲ್ಲಿ ಶುದ್ಧೀಕರಣಗೊಳ್ಳುವ 150 ಎಂ.ಎಲ್.ಡಿ ನೀರನ್ನು ಚಿಕ್ಕಬಳ್ಳಾಪುರ ಜಿಲ್ಲೆಯ ಕೆರೆಗಳನ್ನು ತುಂಬಿಸಲು ಸಣ್ಣ ನೀರಾವರಿ ಇಲಾಖೆಗೆ ಸರಬರಾಜು ಮಾಡಲಾಗುತ್ತಿದೆ.<br>➤ ಕಬ್ಬನ್ ಉದ್ಯಾನವನದಲ್ಲಿರುವ ತೃತೀಯ ಹಂತದ 4 ಎಂ.ಎಲ್.ಡಿ ಘಟಕದಲ್ಲಿ ಶುದ್ಧೀಕರಣಗೊಳ್ಳುವ ನೀರನ್ನು ರಾಜಭವನ, ವಿಧಾನಸೌಧ, ಮಾನ್ಯ ಉಚ್ಚ ನ್ಯಾಯಾಲಯ, ಗಾಲ್ಫ್‌ಕೋರ್ಸ್, ಕಬ್ಬನ್‌ಪಾರ್ಕ್, ನೆಹರು ಪ್ಲಾನಿಟೋರಿಯಂ, ಇಂದಿರಾಗಾಂಧಿ ಪೌಟೆಂನ್ ಪಾರ್ಕ್‌ಗಳ ನೀರಾವರಿಗಾಗಿ ಹಾಗೂ ಕುಡಿಯಲು ಹೊರತುಪಡಿಸಿ ಇತರೆ ಉದ್ದೇಶಗಳಿಗಾಗಿ ಸರಬರಾಜು ಮಾಡಲಾಗುತ್ತಿದೆ. |

| | | |
|---|---|---|
| | | ➢ ಲಾಲ್‌ಬಾಗ್‌ನಲ್ಲಿರುವ ತೃತೀಯ ಹಂತದ 1.5 ಎಂ.ಎಲ್.ಡಿ ಘಟಕದಲ್ಲಿ ಶುದ್ಧೀಕರಣಗೊಳ್ಳುವ ನೀರನ್ನು ಲಾಲ್‌ಬಾಗ್ ಉದ್ಯಾನವನಕ್ಕೆ ಸರಬರಾಜು ಮಾಡಲಾಗುತ್ತಿದೆ.<br>➢ ಜಕ್ಕೂರಿನಲ್ಲಿರುವ ತೃತೀಯ ಹಂತದ 15 ಎಂ.ಎಲ್.ಡಿ ಘಟಕದಲ್ಲಿ ಶುದ್ಧೀಕರಣಗೊಳ್ಳುವ ನೀರನ್ನು ಯಲಹಂಕದಲ್ಲಿರುವ ಕೆಪಿಸಿಎಲ್ ರವರ ವಿದ್ಯುತ್ ಉತ್ಪಾದನ ಸ್ಥಾವರಕ್ಕೆ ಸರಬರಾಜು ಮಾಡಲಾಗುತ್ತಿದೆ.<br>➢ ಯಲಹಂಕದಲ್ಲಿರುವ ತೃತೀಯ ಹಂತದ 10 ಎಂ.ಎಲ್.ಡಿ ಘಟಕದಲ್ಲಿ ಶುದ್ಧೀಕರಣಗೊಳ್ಳುವ ನೀರನ್ನು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ, ಐಎಎಫ್, ಬಿಇಎಲ್, ರೈಲು ಚಕ್ರ ಕಾರ್ಖಾನೆ, ಐ.ಟಿ.ಸಿ. ಇತ್ಯಾದಿಗಳಿಗೆ ಸರಬರಾಜು ಮಾಡಲಾಗುತ್ತಿದೆ.<br>➢ ವೃಷಭಾವತಿ ಕಣಿವೆಯಲ್ಲಿರುವ ತೃತೀಯ ಹಂತದ 60 ಎಂ.ಎಲ್.ಡಿ ಘಟಕದಲ್ಲಿ ಶುದ್ಧೀಕರಣಗೊಳ್ಳುವ ನೀರನ್ನು ಮೆ॥ ಅರವಿಂದ್ ಮಿಲ್ಸ್, ಮೆ॥ ವಂಡರ್ ಬ್ಲೂಸ್ ಮತ್ತು ಮೆ॥ ನಂದಿ ಎಕಾನಾಮಿಕ್ ಕಾರಿಡಾರ್ ಎಂಟರ್‌ಪ್ರೈಸಸ್ ಗಳಿಗೆ ಸರಬರಾಜು ಮಾಡಲಾಗುತ್ತಿದೆ.<br>➢ ವೃಷಭಾವತಿ ಕಣಿವೆಯಲ್ಲಿರುವ ದ್ವಿತೀಯ ಹಂತದ 75 ಎಂ.ಎಲ್.ಡಿ ಘಟಕದಲ್ಲಿ ಶುದ್ಧೀಕರಣಗೊಳ್ಳುವ ನೀರನ್ನು ಮೆ॥ ಭಾಗ್ಯಲಕ್ಷ್ಮೀ ಫಾರಂ ಮತ್ತು ಮೆ॥ ಟ್ಯಾಂಗ್‌ಲೈನ್ ಡೆವಲಪರ್ಸ್ (ಗ್ಲೋಬಲ್ ವಿಲೇಜ್) ಗಳಿಗೆ ಸರಬರಾಜು ಮಾಡಲಾಗುತ್ತಿದೆ.<br>➢ ಕಾಡುಗೋಡಿಯಲ್ಲಿರುವ ದ್ವಿತೀಯ ಹಂತದ 6 ಎಂ.ಎಲ್.ಡಿ ಘಟಕದಲ್ಲಿ ಶುದ್ಧೀಕರಣಗೊಳ್ಳುವ ನೀರನ್ನು ಮೆ॥ ಹೆಚ್‌ಪಿಸಿಎಲ್ ಗೆ ಸರಬರಾಜು ಮಾಡಲಾಗುತ್ತಿದೆ.<br>➢ ಉಳಿದ ಶುದ್ಧೀಕರಿಸಿದ ತ್ಯಾಜ್ಯ ನೀರನ್ನು ಮಳೆನೀರು ಕಾಲುವೆಗೆ ಹಾಗೂ ಘಟಕದ ಕೆಳದಂಡೆಯ ಕೆರೆಗಳಿಗೆ ಹರಿಸಲಾಗುತ್ತಿದೆ. |
| ಈ) | ಸದರಿ ನೀರನ್ನು ಖಾಸಗಿ ಟ್ಯಾಂಕರ್ ಹಾಗೂ ಲಾರಿಗಳ ಮುಖಾಂತರ ಎಷ್ಟು ನೀರನ್ನು ಸರಬರಾಜು ಮಾಡಲಾಗುತ್ತಿದೆ; ಇದರಿಂದ ಪಾಲಿಕೆಗೆ ಆಗುತ್ತಿರುವ ವೆಚ್ಚವೆಷ್ಟು? (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ಖಾಸಗಿ ಟ್ಯಾಂಕರ್ ಲಾರಿಗಳಿಗೆ ತೃತೀಯ ಹಂತದಲ್ಲಿ ಶುದ್ಧೀಕರಿಸಿದ ತ್ಯಾಜ್ಯ ನೀರನ್ನು ಪ್ರತಿ ತಿಂಗಳು 42,500 ಕಿಲೋ ಲೀಟರ್ ಹಾಗೂ ದ್ವಿತೀಯ ಹಂತದಲ್ಲಿ ಶುದ್ಧೀಕರಿಸಿದ ತ್ಯಾಜ್ಯ ನೀರನ್ನು ಪ್ರತಿ ತಿಂಗಳು 8,200 ಕಿಲೋ ಲೀಟರ್ ಸರಬರಾಜು ಮಾಡಲಾಗುತ್ತಿದೆ. ಖಾಸಗಿ ಟ್ಯಾಂಕರ್ ಲಾರಿಗಳ ಮುಖಾಂತರ ತ್ಯಾಜ್ಯ ನೀರನ್ನು ಸರಬರಾಜು ಮಾಡಲು ಬೆಂಗಳೂರು ಜಲಮಂಡಳಿಯು ಯಾವುದೇ ವೆಚ್ಚವನ್ನು ಮಾಡುತ್ತಿರುವುದಿಲ್ಲ.<br><br>ಬೆಂಗಳೂರು ಜಲಮಂಡಳಿಯು ತೃತೀಯ ಹಂತದಲ್ಲಿ ಶುದ್ಧೀಕರಿಸಿದ ತ್ಯಾಜ್ಯ ನೀರಿಗೆ ಪ್ರತಿ ಕಿಲೋ ಲೀಟರ್‌ಗೆ ರೂ.15.00 ರಂತೆ ಹಾಗೂ ದ್ವಿತೀಯ ಹಂತದಲ್ಲಿ ಶುದ್ಧೀಕರಿಸಿದ ತ್ಯಾಜ್ಯ ನೀರಿಗೆ ಪ್ರತಿ ಕಿಲೋ ಲೀಟರ್ ಗೆ ರೂ.10.00 ರಂತೆ ಶುದ್ಧೀಕರಣ ಘಟಕದ ಬಳಿ ಪಡೆಯಲು ಗ್ರಾಹಕರಿಗೆ ಶುಲ್ಕವನ್ನು ವಿಧಿಸುತ್ತಿದೆ. |

**ಕಡತ ಸಂಖ್ಯೆ:** ನಅಇ 138 ಎಂಎನ್‌ಐ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ